**3 ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಪಿ.ಸಿ.ಆರ್. ನಂ.2276/2020 ಸಿಡಬ್ಲ್ಯು -1**

| | |
|---|---|
| **ಸಾಕ್ಷಿದಾರರ ಹೆಸರು** | ದಶರಥ.ಇ., |
| **ತಂದೆಯ ಹೆಸರು** | ಈರಣ್ಣ. |
| **ವಯಸ್ಸು** | 45 ವರ್ಷ |
| **ಉದ್ಯೋಗ** | ವ್ಯವಸಾಯ, |
| **ವಾಸ** | ಹೊಸಗೊಲ್ಲರ ಹಟ್ಟಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. |
| **ಪ್ರಮಾಣೀಕರಿಸಿದ ದಿನಾಂಕ** | 14.08.2026 |

**ದಂ.ಪ್ರ.ಸಂ.ಕಲಂ. 200 ರಡಿಯಲ್ಲಿ ಸಾಕ್ಷಿಗೆ ಪ್ರಮಾಣ ಪೂರ್ವಕ ಹೇಳಿಕೆಃ**

ದಿ.17.12.2016 ರಲ್ಲಿ 29.800 ಗ್ರಾಂ ಚಿನ್ನದ ನೆಕ್ಲೆಸ್ ನ್ನು ಮುತ್ತೂಟ್ ಪಿನ್ ಕಾರ್ಪ್ ಲಿ. ಕೋನಪ್ಪನ ಅಗ್ರಹಾರ ಶಾಖೆಯಲ್ಲಿ ಒಂದನೇ ಆರೋಪಿಯು ಶಾಖೆಯಲ್ಲಿ ಶಾಖಾ ಮ್ಯಾನೇಜರ್ ಆಗಿದ್ದು ಆತನ ಬಳಿ ರೂ.50,000/- ಅಡಮಾನ ಇಟ್ಟಿರುತ್ತೇನೆ. ನಾನು ಸದರಿ ಅಡಮಾನ ಇಟ್ಟಿದ್ದ ಚಿನ್ನವನ್ನು ಅವರಿಗೆ ಹಣವನ್ನು ಕೊಟ್ಟು ಬಿಡಿಸಿಕೊಳ್ಳಲು ಆರು ತಿಂಗಳು ಒಳಗೆ ಹೋಗಿರುತ್ತೇನೆ. ಆದರೆ ಸದರಿ ಮುತ್ತೂಟ್ ಪಿನ್ ಕಾರ್ಪ್ ಲಿ. ಕೋನಪ್ಪನ ಅಗ್ರಹಾರ ಕಛೇರಿಯು ಮುಚ್ಚಿತ್ತು. ನಂತರ ನಾನು ಫೋನ್ ಮಾಡಿರುತ್ತೇನೆ. ಅವರು ನನ್ನ ಫೋನ್ ಕರೆಗೆ ಯಾವುದೇ ಪ್ರತಿಕ್ರಿಯೇ ನೀಡಿರುವುದಿಲ್ಲ. ನಾನು ಅಕ್ಕಪಕ್ಕದವರನ್ನು ವಿಚಾರಿಸಿದಾಗ, ಅದು ಎಲೆಕ್ಟ್ರಾನಿಕ್ ಸಿಟಿಯಲ್ಲಿ ಕಛೇರಿ ಇರಬಹುದು, ಕಸ್ಟಮರ್ ಕೇರ್ ಗೆ ಫೋನ್ ಮಾಡಿ ಎಂದು ತಿಳಿಸಿರುತ್ತಾರೆ. ನಂತರ ನಾನು ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕಛೇರಿಗೆ ಹೋಗಿರುತ್ತೇನೆ. ದಿ.16.12.2017 ರಂದು ಬೆಳಿಗ್ಗೆ 10.00 ರಿಂದ 12.00 ಗಂಟೆ ಒಳಗೆ ಬನ್ನಿ ಎಂದು ನನಗೆ ತಿಳಿಸಿರುತ್ತಾರೆ. ರೂ.60,694/- ಗಳನ್ನು ತೆಗೆದುಕೊಂಡು ಬನ್ನಿ ನಿಮ್ಮ ಆಭರಣವನ್ನು ವಾಪಸ್ ನೀಡುತ್ತೇವೆ ಎಂದು ಹೇಳಿರುತ್ತಾರೆ. ಸದರಿ ದಿನಾಂಕದಂದು ನಾನು ಕಛೇರಿಗೆ ಹೋದಾಗ ನಿಮ್ಮ ಚಿನ್ನವನ್ನು ಈಗಾಗಲೇ ಹರಾಜು ಹಾಕಿರುತ್ತೇವೆ

ಮತ್ತು ನಿಮಗೆ ಚಿನ್ನವನ್ನು ಕೊಡಲು ಬರುವುದಿಲ್ಲ ಎಂದು ಆರೋಪಿಯು ತಿಳಿಸಿರುತ್ತಾನೆ. ಉಳಿದ ರೂ.3,827/- ನಿಮಗೆ ಚೆಕ್ ಮೂಲಕ ಕಳುಹಿಸಿರುತ್ತೇವೆ. ನೀವು ತೆಗೆದುಕೊಳ್ಳಿ ಎಂದು ತಿಳಿಸಿರುತ್ತಾರೆ. ಆದರೆ ನನಗೆ ಇಲ್ಲಿಯವರೆಗೆ ಯಾವುದೇ ಚೆಕ್ಕು ಆಗಲೀ ಅಥವಾ ಹಣವಾಗಲೀ ಬಂದಿರುವುದಿಲ್ಲ. ನಂತರ ನಾನು ನಮ್ಮ ವಕೀಲರ ಮೂಲಕ ದಿ.05.02.2018 ರಂದು ಆರೋಪಿಗೆ ಲೀಗಲ್ ನೋಟಿಸ್ ನ್ನು ಕಳುಹಿಸಿರುತ್ತೇನೆ. ಆದರೆ ಆರೋಪಿಯು ನನ್ನ ಲೀಗಲ್ ನೋಟಿಸ್ ಗೆ ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ. ದಿ.21.03.2019 ರಂದು ನಾನು ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಆರೋಪಿಯ ವಿರುದ್ದ ನೀಡಿರುತ್ತೇನೆ. ಆದರೆ ಪೊಲೀಸರು ಯಾವುದೇ ಸೂಕ್ತ ಕಾನೂನು ಕ್ರಮವನ್ನು ತೆಗೆದುಕೊಳ್ಳದೇ ಇದುದ್ದರಿಂದ ನಾನು ಈ ಖಾಸಗಿ ದೂರನ್ನು ಆರೋಪಿತರ ವಿರುದ್ದ ಸಲ್ಲಿಸಿರುತ್ತೇನೆ.

2. ಸಾಕ್ಷಿಯು ಖಾಸಗಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಖಾಸಗಿ ದೂರನ್ನು ನಿಸಿ.1 ಎಂದು, ಸಾಕ್ಷಿಯ ಸಹಿಯನ್ನು ನಿಸಿ.1(ಎ) ಎಂದು ಗುರುತಿಸಲಾಯಿತು.

***ಮುಂದುವರೆದ ಸತ್ಯಪ್ರಮಾಣ ಹೇಳಿಕೆಗಾಗಿ ಸಮಯ ಕೋರಿದ್ದರಿಂದ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**